# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1202
ಸದಸ್ಯರ ಹೆಸರು : ಶ್ರೀ ಐವನ್ ಡಿ 'ಸೋಜಾ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 17.12.2025

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ವಿದ್ಯುತ್ ಚಾಲಿತ ಸಾರಿಗೆ ಬಸ್ಸುಗಳಿಗೆ ಪರ್ಮಿಟ್ ಪಡೆಯುವುದು ಕಡ್ಡಾಯವೇ; (ವಿವರ ನೀಡುವುದು) | ಹೌದು, ವಿದ್ಯುತ್ ಚಾಲಿತ ಸಾರಿಗೆ ಬಸ್ಸುಗಳಿಗೆ ರಹದಾರಿ ಪಡೆಯುವುದು ಕಡ್ಡಾಯವಾಗಿರುತ್ತದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 3 ಟಿಡಿಓ 2019, ದಿನಾಂಕ:01.07.2025ರಲ್ಲಿ ಹೊಸದಾಗಿ ನೋಂದಣಿಯಾಗುವ ಮತ್ತು ಈಗಾಗಲೇ ನೋಂದಣಿಯಾಗಿದ್ದ, ಮೆಥನಾಲ್ ಮತ್ತು ಇಥನಾಲ್ ಇಂಧನವನ್ನು ಬಳಸುವ ಹಾಗೂ ಬ್ಯಾಟರಿ ಚಾಲಿತ ಎಲ್ಲಾ ಸಾರಿಗೆ ವಾಹನಗಳಿಗೆ ರಹದಾರಿಯನ್ನು **ಶುಲ್ಕ ರಹಿತವಾಗಿ ಮಂಜೂರು ಮಾಡಲು** ಹಾಗೂ ವಿತರಿಸಲು ಅನುಮತಿ ನೀಡಿ ಆದೇಶಿಸಲಾಗಿದೆ. ಪ್ರತಿಯನ್ನು '**ಅನುಬಂಧ-ಅ**' ದಲ್ಲಿ ಒದಗಿಸಲಾಗಿದೆ. ಅದರಂತೆ ಪ್ರಸ್ತುತ ವಿದ್ಯುತ್‌ಚಾಲಿತ ಸಾರಿಗೆ ಬಸ್ಸುಗಳು ರಹದಾರಿ (ಪರ್ಮಿಟ್) ಪಡೆಯುವುದು ಕಡ್ಡಾಯವಾಗಿರುತ್ತದೆ. |
| ಆ. | ವಿದ್ಯುತ್ ಚಾಲಿತ ಬಸ್ಸುಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಯಾವ ವಿನಾಯಿತಿ ನೀಡಲಾಗಿದೆ; (ವಿವರ ನೀಡುವುದು) | ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: S.O. 5333 (E), ದಿನಾಂಕ: 18-10-2018ರಲ್ಲಿ ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66 (3)(ಎನ್)ರಲ್ಲಿ ಪ್ರದತ್ತವಾದ ಅಧಿಕಾರದಡಿ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಸಂಚರಿಸುವ ಸಾರಿಗೆ ವಾಹನಗಳಿಗೆ ಹಾಗೂ ಬ್ಯಾಟರಿ ಆಧಾರಿತ ವಾಹನಗಳಿಗೆ ಸದರಿ ಕಾಯ್ದೆ ಕಲಂ 66 (1) ರಡಿ ರಹದಾರಿ ವಿನಾಯತಿ ನೀಡಿ ಆದೇಶಿಸಿದೆ. ಪ್ರತಿಯನ್ನು '**ಅನುಬಂಧ-ಆ**' ದಲ್ಲಿ ಒದಗಿಸಲಾಗಿದೆ.<br><br>ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 3 ಟಿಡಿಓ 2019, ದಿನಾಂಕ:01-07-2025ರಲ್ಲಿ ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66 (3)(ಎನ್)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಕೆಯ ಸಾರಿಗೆ ವಾಹನಗಳಿಗೆ ಸದರಿ ಕಾಯ್ದೆ ಕಲಂ 66 (1) ರಹದಾರಿ ವಿನಾಯತಿ ನೀಡಿ ಹೊರಡಿಸಲಾಗಿದ್ದ, ಅಧಿಸೂಚನೆ ಸಂಖ್ಯೆ: ಟಿಡಿ 2 ಟಿಡಿಓ 2019, ದಿನಾಂಕ: 20-01-2022ಅನ್ನು ಹಿಂಪಡೆದು, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಮೋಟಾರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ವಾಹನಗಳ ಕಾಯ್ದೆ 1988ರ ಕಲಂ 66(3)(ಎನ್) ಮತ್ತು ಸದರಿ ಕಾಯ್ದೆಯ ಕಲಂ 96(xxxiii)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಹೊಸದಾಗಿ ನೋಂದಣಿಯಾಗುವ ಮತ್ತು ಈಗಾಗಲೇ ನೋಂದಣಿಯಾಗಿರುವ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಇದುವರೆಗೆ ರಹದಾರಿ ಪಡೆಯದೆ ಸಂಚರಿಸುತ್ತಿರುವ ಎಲ್ಲಾ ಸಾರಿಗೆ ವಾಹನಗಳಿಗೆ ಸಂಬಂಧಿಸಿದ ರಹದಾರಿಯನ್ನು **ಶುಲ್ಕ ರಹಿತವಾಗಿ ಮಂಜೂರು ಮಾಡಲು** ಹಾಗೂ ವಿತರಿಸಲು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ.<br><br>ಅಲ್ಲದೆ, ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 07 ಟಿಡಿಆರ್ 2024, ದಿನಾಂಕ: 30-03-2024ರಲ್ಲಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ 1957ರ, ಕಲಂ 16 (1)ರಲ್ಲಿ ಪ್ರದತ್ತವಾದ ಅಧಿಕಾರದಡಿ ರಾಜ್ಯದಲ್ಲಿ ನೋಂದಣಿಯಾಗುವ ರೂ.25 ಲಕ್ಷ ಮೇಲ್ಪಟ್ಟ ಸಾರಿಗೇತರ ಮೋಟಾರ್ ಕಾರ್, ಜೀಪ್, ಓಮಿನಿ ಬಸ್ ಮತ್ತು ಖಾಸಗಿ ಸೇವಾ ವಾಹನಗಳಿಗೆ ಶೇಕಡ 10ರಷ್ಟು ಮೋಟಾರು ವಾಹನ ತೆರಿಗೆಯನ್ನು ನಿಗಧಿಪಡಿಸಿರುವುದನ್ನು ಹೊರತುಪಡಿಸಿ, ಎಲ್ಲಾ ಸಾರಿಗೇತರ ಮತ್ತು ಸಾರಿಗೆ ವಾಹನಗಳ ವಿದ್ಯುತ್, ಇ-ರಿಕ್ಷಾ ಮತ್ತು ಇ-ಕಾರ್ಟ್ ಇಂಧನ ಒಳಗೊಂಡ ವಾಹನಗಳಿಗೆ **ಮೋಟಾರು ವಾಹನ ತೆರಿಗೆಯಿಂದ ವಿನಾಯತಿಯನ್ನು ನೀಡಿ** ಆದೇಶ ಹೊರಡಿಸಲಾಗಿದ್ದು, ಪ್ರತಿಯನ್ನು '**ಅನುಬಂಧ-ಇ**'ರಲ್ಲಿ ಒದಗಿಸಲಾಗಿದೆ. |
| ಇ. | ವಿದ್ಯುತ್ ಚಾಲಿತ ಬಸ್ಸುಗಳಿಂದ ಇಲಾಖೆಗೆ ಲಾಭವಿದೆಯೇ; ಸರ್ಕಾರ ಈ ಬಸ್ಸುಗಳನ್ನು ರಾಜ್ಯಾದ್ಯಂತ ವಿಸ್ತರಿಸಲು ಕ್ರಮ ಕೈಗೊಂಡಿದೆಯೇ; ಪ್ರಸ್ತುತ ರಾಜ್ಯಾದ್ಯಂತ ಎಷ್ಟು ಬಸ್ಸುಗಳನ್ನು ಓಡಿಸಲಾಗುತ್ತಿದೆ; (ವಿವರ ನೀಡುವುದು) | ವಿದ್ಯುತ್ ಚಾಲಿತ ಬಸ್ಸುಗಳು ಪರಿಸರ ಸ್ನೇಹಿಯಾಗಿರುವುದರಿಂದ ನಗರದಲ್ಲಿ ವಾಯುಮಾಲಿನ್ಯ ನಿಯಂತ್ರಣಕ್ಕೆ ಸಹಕಾರಿಯಾಗಿರುತ್ತದೆ. ಪ್ರಸ್ತುತ ರಾಜ್ಯಾದ್ಯಂತ ಒಟ್ಟು 1957 ಬಸ್ಸುಗಳು ನೋಂದಣಿಯಾಗಿರುತ್ತವೆ. ವಿವರಗಳನ್ನು **ಅನುಬಂಧ-ಈ** ರಲ್ಲಿ ನೀಡಲಾಗಿದೆ.<br><br>ಭಾರತ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು (MoHUA) 'PM-eBus Sewa' ಯೋಜನೆಯನ್ನು ಕೈಗೆತ್ತಿಕೊಂಡಿರುತ್ತದೆ. ಭಾರತ ಸರ್ಕಾರವು ಸದರಿ ಇ-ಬಸ್ ಕಾರ್ಯಾಚರಣೆಗೆ MoHUA ಮೂಲಕ CESL (Convergence Energy Services Ltd.,) ರವರು ಒಟ್ಟು ವೆಚ್ಚದ ಒಪ್ಪಂದ (GCC-wet lease)- ಮಾದರಿಯ ಮೇಲೆ ಕೇಂದ್ರ ಸರ್ಕಾರವೇ ಟೆಂಡರ್ ಪ್ರಕ್ರಿಯೆ ನಡೆಸುತ್ತದೆ. **ಜಿಸಿಸಿ (Gross Cost Contract) ಆಧಾರದ ಮೇಲೆ ವಿದ್ಯುತ್ ಚಾಲಿತ ಬಸ್‌ಗಳನ್ನು ಪೂರೈಸಲು L1** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | **ಆಗಿ ಆಯ್ಕೆಯಾದ ಖಾಸಗಿ ಬಿಡ್ಡುದಾರರೇ (ಟಾಟಾ, ಅಶೋಕಾ ಲೇಲ್ಯಾಂಡ್ ಮುಂತಾದ ಆಯ್ಕೆಯಾಗುವ ಸಂಸ್ಥೆಗಳು) ಚಾಲಕರ ಸೇವೆ, ನಿರ್ವಹಣೆ ಹಾಗೂ ಬಸ್ಸುಗಳನ್ನು ಚಾರ್ಜಿಂಗ್‌ಗೊಳಿಸಲು ತಗಲುವ ವಿದ್ಯುತ್ ವೆಚ್ಚವನ್ನು ಪಾವತಿಸಬೇಕಾಗಿರುತ್ತದೆ. ಸದರಿ ಖಾಸಗಿ ಬಿಡ್‌ದಾರರೇ ಬಸ್ಸುಗಳ ಮಾಲೀಕರಾಗಿದ್ದು, ಬಸ್ಸುಗಳ ಸಂಪೂರ್ಣ ನಿರ್ವಹಣೆಯ ಜವಾಬ್ದಾರಿಯು ಅವರದ್ದೇ ಆಗಿರುತ್ತದೆ. ಆದರೆ, ಬಸ್ಸುಗಳನ್ನು ಸಾರಿಗೆ ಸಂಸ್ಥೆಗಳಿಗೆ ಜಿ.ಸಿ.ಸಿ ಆಧಾರದ ಮೇಲೆ ಬಾಡಿಗೆಗೆ ನೀಡುತ್ತಾರೆ. ಬಸ್‌ಗಳ ಕಾರ್ಯಾಚರಣೆಯಿಂದ ಪ್ರತಿ ಕಿಲೋಮೀಟರ್‌ಗೆ ತಗಲುವ ವೆಚ್ಚವನ್ನು (CPKM) ಟೆಂಡರ್‌ನಲ್ಲಿ ಅಂತಿಮಗೊಳಿಸಿದ ದರದನ್ವಯ ಸಾರಿಗೆ ಸಂಸ್ಥೆಗಳು ಖಾಸಗಿ ಬಿಡ್ಡುದಾರರಿಗೆ ನೀಡಬೇಕಾಗಿರುತ್ತದೆ ಹಾಗೂ ಸದರಿ ವಿದ್ಯುತ್ ಚಾಲಿತ ಬಸ್ಸುಗಳಿಗೆ ನಿರ್ವಾಹಕರನ್ನು ಮಾತ್ರ ಸಾರಿಗೆ ನಿಗಮಗಳು ಒದಗಿಸಬೇಕಾಗುತ್ತದೆ.**<br><br>ಸದರಿ PM e-bus sewa ಯೋಜನೆಯಡಿಯಲ್ಲಿ ಆಯ್ಕೆಯಾದ ಕರ್ನಾಟಕ ರಾಜ್ಯದ 10 ನಗರಗಳಿಗೆ ಒಟ್ಟು 750 ಸಂಖ್ಯೆ ವಿದ್ಯುತ್ ಚಾಲಿತ ಬಸ್ಸುಗಳನ್ನು ಜಿಸಿಸಿ (Gross Cost Contract) ಆಧಾರದ ಮೇಲೆ ಒದಗಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿರುತ್ತದೆ.<br><br>ಮುಂದುವರೆದು, ಟೆಂಡರ್‌ನಲ್ಲಿ ಖಾಸಗಿ ಬಿಡ್ಡುದಾರರು Standard ಬಸ್ಸುಗಳಿಗೆ ಸಂಬಂಧಿಸಿದಂತೆ ಬಿಡ್‌ನಲ್ಲಿ ಪ್ರತಿ ಕಿ.ಮೀ.ಗೆ ನಮೂದಿಸುವ ದರದಲ್ಲಿ ಕೇಂದ್ರ ಸರ್ಕಾರವು ಪ್ರತಿ ಕಿ.ಮೀ.ಗೆ ರೂ.24/-ರಷ್ಟು CA (Central Assistance) ಮಾದರಿಯಲ್ಲಿ ನೀಡಲಿದ್ದು ಉಳಿದ ವ್ಯತ್ಯಾಸದ ಮೊತ್ತವನ್ನು ಸಂಬಂಧಪಟ್ಟ ಸಾರಿಗೆ ನಿಗಮವು ಭರಿಸಬೇಕಾಗಿರುತ್ತದೆ.<br><br>ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಶೇ.60ರಷ್ಟು ಅನುದಾನವನ್ನು ಕೇಂದ್ರ ಸರ್ಕಾರ ಒದಗಿಸುತ್ತಿದ್ದು, ಉಳಿದ ಶೇ.40ರಷ್ಟು ಅನುದಾನವನ್ನು ಮಾತ್ರ ರಾಜ್ಯ ಸರ್ಕಾರ ಒದಗಿಸಬೇಕಾಗಿರುತ್ತದೆ. ಸದರಿ ಯೋಜನೆಯಡಿ ಎಲೆಕ್ಟ್ರಿಕ್ ಬಸ್ಸುಗಳಿಗೆ ಅವಶ್ಯವಿರುವ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಸಹ ಕೇಂದ್ರ ಸರ್ಕಾರವೇ ಟೆಂಡರ್ ಆಹ್ವಾನಿಸುತ್ತದೆ ಹಾಗೂ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಆಹ್ವಾನಿಸಲಾಗುವ ಟೆಂಡರ್‌ನಲ್ಲಿ ವಿಧಿಸಬಹುದಾದ ಷರತ್ತು ಮತ್ತು ನಿಬಂಧನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಅಭಿಪ್ರಾಯ ಪಡೆದು ಸೂಕ್ತವಾದವುಗಳನ್ನು ಅಳವಡಿಸಿಕೊಂಡು ಕೇಂದ್ರ ಸರ್ಕಾರವೇ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸುತ್ತದೆ.<br><br>ಭಾರತ ಸರ್ಕಾರವು ಹಣ ಪಾವತಿ ವಿಳಂಬದ ಸಂಭಾವ್ಯ ಅಪಾಯಗಳನ್ನು ಪರಿಹರಿಸಲು ಹಾಗೂ OEM/ ಆಚರಣೆದಾರರ Financial Viability ಅನ್ನು ಹೆಚ್ಚಿಸಲು, ಸಾರ್ವಜನಿಕ ಸಾರಿಗೆ ಸಂಸ್ಥೆಗಳಿಗೆ ಎಲೆಕ್ಟ್ರಿಕ್ ಬಸ್‌ಗಳ ಖರೀದಿ ಮತ್ತು ಕಾರ್ಯಾಚರಣೆಗಾಗಿ Payment Security Mechanism ವ್ಯವಸ್ಥೆಯನ್ನು ರೂಪಿಸಿದ್ದು, ಸದರಿ ವ್ಯವಸ್ಥೆಗೆ ರಾಜ್ಯ ಸರ್ಕಾರವು ಸಹ ಅನುಮೋದನೆ ನೀಡಿರುತ್ತದೆ.<br><br>ಅಲ್ಲದೇ, ಮಾರ್ಚ್ 2027ರವರೆಗೆ ಆಯ್ದ ನಗರಗಳಿಗೆ ವಿದ್ಯುತ್ ಮೂಲಸೌಕರ್ಯ ರಚನೆಗೆ 100%ರಷ್ಟು ನೆರವನ್ನು ಕೇಂದ್ರ ಸರ್ಕಾರ ಒದಗಿಸುತ್ತದೆ. **ಸದರಿ ಯೋಜನೆಯಡಿ ನಿಗಮವಾರು ಬಸ್ಸುಗಳ ಹಂಚಿಕೆ ವಿವರ ಕೆಳಕಂಡಂತಿದೆ:-**<br><br>**ಕ.ರಾ.ರ.ಸಾ.ನಿಗಮ:-** PM e-bus sewa ಯೋಜನೆ ಯಡಿಯಲ್ಲಿ ನಿಗಮಕ್ಕೆ ಒಟ್ಟು 350 ಸಂಖ್ಯೆ ವಿದ್ಯುತ್ ಚಾಲಿತ ಬಸ್‌ಗಳನ್ನು ಹಂಚಿಕೆ ಮಾಡಿದ್ದು, ಸದರಿ ಬಸ್‌ಗಳನ್ನು ನಿಗಮದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಜಿಲ್ಲೆಗಳಿಗೆ ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಉದ್ದೇಶಿಸಲಾಗಿದೆ:-<br><br>**ಜಿಲ್ಲೆ** — **ಬಸ್‌ಗಳ ಸಂಖ್ಯೆ**<br>ಮಂಗಳೂರು — 100<br>ಮೈಸೂರು — 100<br>ದಾವಣಗೆರೆ — 50<br>ಶಿವಮೊಗ್ಗ — 50<br>ತುಮಕೂರು — 50<br>**ಒಟ್ಟು** — **350**<br><br>ಮುಂದುವರೆದು, ನಿಗಮಕ್ಕೆ ಕೇಂದ್ರ ಸರ್ಕಾರದ FAME-II ಯೋಜನೆ ಅಡಿಯಲ್ಲಿ 50 ಸಂಖ್ಯೆಯ ಹವಾನಿಯಂತ್ರಿತ 12 ಮೀಟರ್ ಎಲೆಕ್ಟ್ರಿಕ್ ಬಸ್ಸುಗಳು ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಮಂಜೂರು ಮಾಡಲಾಗಿರುತ್ತದೆ. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಪ್ರಸ್ತುತ 47 ಎಲೆಕ್ಟ್ರಿಕ್ ಬಸ್‌ಗಳು ಕಾರ್ಯಾಚರಣೆಯಲ್ಲಿದ್ದು, ಬೆಂಗಳೂರು (ನಗರ) 20, ಮೈಸೂರು 14, ದಾವಣಗೆರೆ 11 ಹಾಗೂ ಶಿವಮೊಗ್ಗ ಜಿಲ್ಲೆಗೆ 02 ಬಸ್‌ಗಳನ್ನು ಹಂಚಿಕೆ ಮಾಡಲಾಗಿರುತ್ತದೆ.<br><br>**ಬೆಂ.ಮ.ಸಾ.ಸಂಸ್ಥೆ:-** ಸಂಸ್ಥೆಗೆ ಕೇಂದ್ರ ಸರ್ಕಾರದ ಫೇಮ್-2 ಯೋಜನೆಯಡಿ 1221 ಹವಾನಿಯಂತ್ರಣ ರಹಿತ ಎಲೆಕ್ಟ್ರಿಕ್ ಬಸ್ಸುಗಳನ್ನು ಜಿಸಿಸಿ ಮಾದರಿಯಲ್ಲಿ ಕಾರ್ಯಾಚರಣೆಯಾಗುತ್ತಿವೆ.<br><br>ಕೇಂದ್ರ ಸರ್ಕಾರವು PM E-DRIVE ಯೋಜನೆ ಅಡಿಯಲ್ಲಿ ಸಂಸ್ಥೆಗೆ 4500 ಎಲೆಕ್ಟ್ರಿಕ್ ಬಸ್ಸುಗಳಿಗೆ ಮಂಜೂರಾತಿ ನೀಡಿರುತ್ತದೆ.<br><br>**ವಾ.ಕ.ರ.ಸಾ.ಸಂಸ್ಥೆ:-** PM e-bus sewa ಯೋಜನೆಯಡಿಯಲ್ಲಿ ಸಂಸ್ಥೆಗೆ ಒಟ್ಟು 200 ಸಂಖ್ಯೆ ವಿದ್ಯುತ್ ಚಾಲಿತ ಬಸ್‌ಗಳನ್ನು ಮಂಜೂರು ಮಾಡಿದ್ದು, ಸದರಿ ಬಸ್‌ಗಳನ್ನು ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಜಿಲ್ಲೆಗಳಿಗೆ ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಉದ್ದೇಶಿಸಲಾಗಿದೆ:-<br><br>**ಜಿಲ್ಲೆ** — **ಬಸ್‌ಗಳ ಸಂಖ್ಯೆ**<br>ಬೆಳಗಾವಿ — 100<br>ಹುಬ್ಬಳ್ಳಿ-ಧಾರವಾಡ — 100<br>**ಒಟ್ಟು** — **200**<br><br>**ಕ.ಕ.ರ.ಸಾ.ನಿಗಮ:-** PM e-bus sewa ಯೋಜನೆಯಡಿಯಲ್ಲಿ ಸಂಸ್ಥೆಗೆ ಒಟ್ಟು 200 ಸಂಖ್ಯೆ ವಿದ್ಯುತ್ ಚಾಲಿತ ಬಸ್‌ಗಳನ್ನು ಮಂಜೂರು ಮಾಡಿದ್ದು, ಸದರಿ ಬಸ್‌ಗಳನ್ನು ನಿಗಮದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಜಿಲ್ಲೆಗಳಿಗೆ ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಉದ್ದೇಶಿಸಲಾಗಿದೆ:-<br><br>**ಜಿಲ್ಲೆ** — **ಬಸ್‌ಗಳ ಸಂಖ್ಯೆ**<br>ಕಲಬುರಗಿ — 100<br>ಬಳ್ಳಾರಿ — 50<br>ವಿಜಯಪುರ — 50<br>**ಒಟ್ಟು** — **200** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ವಿದ್ಯುತ್ ಚಾಲಿತ ಬಸ್‌ಗಳು ಕಾರ್ಯಾಚರಣೆಯಲ್ಲಿರುವುದಿಲ್ಲ.<br><br>ಮೇಲ್ಕಂಡಂತೆ ವಿದ್ಯುತ್ ಚಾಲಿತ ಬಸ್‌ಗಳನ್ನು ಒದಗಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ Convergence Energy Services Limited (CESL) ಇವರು ಕೇಂದ್ರ ಸರ್ಕಾರದ ಪರವಾಗಿ ಕ್ರೋಢೀಕೃತ ಪ್ರಮಾಣಕ್ಕೆ ಟೆಂಡರ್ ಆಹ್ವಾನಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>**ಮುಂದುವರೆದು, ದಿನಾಂಕ:25.10.2025ರ ಪತ್ರದಲ್ಲಿ, ಕೇಂದ್ರ ಸರ್ಕಾರದ ಯೋಜನೆಗಳಡಿಯಲ್ಲಿ ಈವರೆವಿಗೂ GCC ಆಧಾರದ ಮೇಲೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಕಾರ್ಯಾಚರಿಸುತ್ತಿರುವ ಬಸ್‌ಗಳಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಕುರಿತು ಪ್ರಸ್ತಾಪಿಸಿ, ಅವುಗಳನ್ನು ಆದ್ಯತೆಯ ಮೇರೆಗೆ ಪರಿಹರಿಸುವಂತೆ ಕೇಂದ್ರ ಸರ್ಕಾರದ ಭಾರಿ ಕೈಗಾರಿಕಾ ಮಂತ್ರಾಲಯದ ಸಚಿವರನ್ನು ಈ ಕೆಳಕಂಡಂತೆ ಕೋರಲಾಗಿದ್ದು, ಪ್ರತಿಯನ್ನು ಅನುಬಂಧ 'ಉ'ದಲ್ಲಿ ನೀಡಲಾಗಿದೆ.**<br>ಬೆಂಗಳೂರು ನಗರದಲ್ಲಿ GCC ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ವಿದ್ಯುತ್ ಬಸ್ ನಿರ್ವಾಹಕರ ಕಾರ್ಯಕ್ಷಮತೆ ಮತ್ತು ಸೇವಾ ಶಿಸ್ತಿನ ಕುರಿತು ತೀವ್ರ ಕಳವಳ ವ್ಯಕ್ತಪಡಿಸುತ್ತಾ, NTPC ವಿದ್ಯುತ್ ವ್ಯಾಪಾರ ನಿಗಮ್, ಟಾಟಾ ಮೋಟಾರ್ಸ್, ಸ್ವಿಚ್ ಮೊಬಿಲಿಟಿ ಮತ್ತು OHM ಗ್ಲೋಬಲ್ ಮೊಬಿಲಿಟಿ ಸೇರಿದಂತೆ OEMಗಳ ಕಾರ್ಯಕ್ಷಮತೆ ನಿರೀಕ್ಷಿತ ಮಟ್ಟಕ್ಕಿಂತ ಕಡಿಮೆಯಾಗಿದೆ.<br><br>1. ಚಾಲಕರಿಗೆ ರಚನಾತ್ಮಕ ಮತ್ತು ಕಠಿಣ ತರಬೇತಿ ಕೊರತೆ, ಕಳಪೆ ನಿರ್ವಹಣೆ, ಸ್ಥಗಿತಗಳು, ರದ್ದತಿಗಳು, ಬ್ಯಾಟರಿ ಸಮಸ್ಯೆಗಳು ಮತ್ತು ಚಾಲಕ ಸಿದ್ಧತೆಯ ಕೊರತೆ ದೊಡ್ಡ ಸಮಸ್ಯೆಗಳಾಗಿವೆ.<br>2. ಪ್ರತಿ ಬಸ್‌ಗೆ ಕಡ್ಡಾಯ 2.3 ಸಿಬ್ಬಂದಿಗಳ ಬದಲು 1.9-2.0 ಸಿಬ್ಬಂದಿ ನಿಯೋಜನೆ ಮಾಡುವ ವೆಚ್ಚ ಕಡಿತ ಕ್ರಮಗಳು ಕಾರ್ಯಾಚರಣೆಯನ್ನು ಹಿಂದುಳಿಸಿರುತ್ತದೆ.<br>3. ಈ ಸಮಸ್ಯೆಗಳು BMTCಯ ಖ್ಯಾತಿಗೆ ಮತ್ತು ಬೆಂಗಳೂರಿನ ಪ್ರಗತಿಪರ ನಗರ ಎಂಬ ಚಿತ್ರಣಕ್ಕೆ ಹಾನಿ ತಂದಿವೆ.<br>4. GCC ಸರಬರಾಜುದಾರರ ಕಾರ್ಯಕ್ಷಮತೆ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಸೂಚಕಗಳು BMTCಯ ಡೀಸೆಲ್ ಫ್ಲೀಟ್‌ಗೆ ಹೋಲಿಸಿದರೆ ಎಲೆಕ್ಟ್ರಿಕ್ ಬಸ್‌ಗಳಲ್ಲಿ ವಿಶ್ವಾಸಾರ್ಹತೆಯ ಕೊರತೆ ಸ್ಪಷ್ಟವಾಗಿ ತೋರಿಸುತ್ತವೆ.<br>5. ಎಲೆಕ್ಟ್ರಿಕ್ ಬಸ್‌ಗಳಲ್ಲಿ ಡೀಸೆಲ್ ಬಸ್‌ಗಳಿಗಿಂತ ಮೂರು ಪಟ್ಟು ಹೆಚ್ಚು ಟ್ರಿಪ್ ರದ್ದತಿಗಳು ಸಂಭವಿಸುತ್ತಿವೆ.<br>6. GCC ಸರಬರಾಜುದಾರರ ನಿರ್ಲಕ್ಷ್ಯದಿಂದ ಸಂಭವಿಸಿರುವ ಸಾವುನೋವುಗಳು ಅಸಮರ್ಥನೀಯವಾಗಿದ್ದು, ತಕ್ಷಣದ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಅಗತ್ಯವಾಗಿದೆ.<br>7. BMTC ಪ್ರತಿ ದಿನ 7,067 ಬಸ್‌ಗಳ ಮೂಲಕ 65,000 ಟ್ರಿಪ್‌ಗಳನ್ನು ನಿರ್ವಹಿಸುತ್ತಿದ್ದು, ಡೀಸೆಲ್ ಫ್ಲೀಟ್ (5,423 ಬಸ್‌ಗಳು) ಲಕ್ಷ ಕಿಲೋಮೀಟರ್‌ಗೆ ಕೇವಲ 0.05 ಅಪಘಾತಗಳಷ್ಟೇ ದಾಖಲಾಗುವ ಅತ್ಯುತ್ತಮ ಸುರಕ್ಷತಾ ಸಾಧನೆಯನ್ನು ಹೊಂದಿದ್ದು, BMTC ಡೀಸೆಲ್ ಬಸ್‌ಗಳು ಲಕ್ಷ ಕಿಮೀಗೆ 0.05 ಅಪಘಾತ ದರವಿದ್ದರೆ, ವಿದ್ಯುತ್ ಫ್ಲೀಟ್ ಗಳಲ್ಲಿ (1,644 ಬಸ್‌ಗಳು) ಲಕ್ಷ ಕಿಲೋಮೀಟರ್‌ಗೆ 0.07 ಅಪಘಾತ ದರವನ್ನು ತೋರಿಸುತ್ತಿದ್ದು, ಇದು ಹೆಚ್ಚಿನ ಅಪಾಯದ ಸೂಚಕವಾಗಿದ್ದು ಸಂಸ್ಥೆಯ ಸುರಕ್ಷತಾ ಪ್ರತಿಷ್ಠೆಗೆ ಹಾನಿ ಮಾಡುತ್ತಿದೆ.<br>8. ಮುಂದುವರೆದು, GCC ಸರಬರಾಜುದಾರರ ಕಾರ್ಯಕ್ಷಮತೆ ವಿಮರ್ಶೆ, ಚಾಲಕ ತರಬೇತಿ ಕಡ್ಡಾಯಗೊಳಿಸುವಿಕೆ ಮತ್ತು ಜಂಟಿ ಮೇಲ್ವಿಚಾರಣಾ ವ್ಯವಸ್ಥೆ ಸ್ಥಾಪನೆ ಮಾಡುವಂತೆ ತುರ್ತು ಕ್ರಮಗಳಿಗಾಗಿ ಮನವಿ ಮಾಡಲಾಗಿದೆ ಹಾಗೂ FAME II ಮತ್ತು CESL ಅಡಿಯಲ್ಲಿ GCC Operators ಬಸ್ಸುಗಳ ಬ್ರೇಕ್‌ಡೌನ್‌ಗಳು, ಸುರಕ್ಷತೆ ಅನುಸರಣೆ ಮತ್ತು ಚಾಲಕ ತರಬೇತಿಯ ಮೇಲೆ ನಿರ್ದಿಷ್ಟ ಗಮನ ಹರಿಸುವುದು ಅಗತ್ಯವಾಗಿರುತ್ತದೆ. |
| ಈ. | ಮಂಗಳೂರು ನಗರದಲ್ಲಿ ವಿದ್ಯುತ್ ಚಾಲಿತ ಬಸ್ಸುಗಳಿಗೆ ಬೇಡಿಕೆ ಇದ್ದು, ಬಸ್ಸುಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೇ; (ವಿವರ ನೀಡುವುದು) | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯಲ್ಲಿ ಬರುವ ಮಂಗಳೂರು ನಗರಕ್ಕೆ ಕೇಂದ್ರ ಸರ್ಕಾರದ PM e-bus sewa ಯೋಜನೆಯಡಿಯಲ್ಲಿ ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು 100 ವಿದ್ಯುತ್ ಚಾಲಿತ ಬಸ್‌ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. |
| ಉ. | ಮಂಗಳೂರಿನಲ್ಲಿ ವಿದ್ಯುತ್ ಚಾಲಿತ ಬಸುಗಳನ್ನು ನಿರ್ವಹಣೆ ಮಾಡಲು ಬೇಕಾದ ವ್ಯವಸ್ಥೆ ಇದೆಯೇ; (ವಿವರ ನೀಡುವುದು) | |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಸದರಿ ಬಸ್‌ಗಳು ನಿಯೋಜನೆಗೊಂಡ ನಂತರ ಮಂಗಳೂರು ವಿಭಾಗದ ವ್ಯಾಪ್ತಿಯಲ್ಲಿ ವಿದ್ಯುತ್ ಚಾಲಿತ ಬಸ್ಸುಗಳ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗುವುದು.<br><br>ಮಂಗಳೂರಿನಲ್ಲಿ ನಿಗಮದ ವಿದ್ಯುತ್ ಚಾಲಿತ ಬಸ್ಸುಗಳನ್ನು ನಿರ್ವಹಣೆ ಮಾಡುವ ಸಲುವಾಗಿ ಮಂಗಳೂರಿನ ಕುಂಟಿಕಾನದಲ್ಲಿ ಹಾಗೂ ಮುಡಿಪು ಬಾಳೇಪುಣಿಯಲ್ಲಿ<br>ಇ-ಘಟಕಗಳನ್ನು ನಿರ್ಮಿಸುವ ಬಗ್ಗೆ ಅನುಮೋದನೆ ಪಡೆಯಲು ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ. |

ಸಂಖ್ಯೆ: ಟಿಡಿ 250 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

"ಅನುಬಂಧ-ಅ"


# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೬೦<br>Volume 160 | ಬೆಂಗಳೂರು, ಬುಧವಾರ, ೦೨ ಜುಲೈ ೨೦೨೫ (ಆಷಾಢ ೧೧, ಶಕವರ್ಷ ೧೯೪೭)<br>BENGALURU, WEDNESDAY, 02 JULY, 2025 (ASHADHA 11, SHAKAVARSHA 1947) | ಸಂಚಿಕೆ ೧೨೬<br>Issue 126 |
| --- | --- | --- |


ಭಾಗ ೩

## ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

**ಕರ್ನಾಟಕ ಸರ್ಕಾರ**

ಸಂ. ಟಿಡಿ 3 ಟಿಡಿಓ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 01-07-2025.

**ಅಧಿಸೂಚನೆ**

ರಾಜ್ಯದಲ್ಲಿ ಸಂಚರಿಸುವ ಬ್ಯಾಟರಿ ಚಾಲಿತ, ಮಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಸಂಚರಿಸುವ ಸಾರಿಗೆ ವಾಹನಗಳಿಗೆ ಮೋಟಾರು ವಾಹನಗಳ ಕಾಯ್ದೆ 1988 ರ ಕಲಂ 66(3) (ಎನ್) ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಕಲಂ 66(1) ರಡಿ ರಹದಾರಿ (Permit) ಪಡೆಯುವುದರಿಂದ ವಿನಾಯತಿ ನೀಡಿ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಟಿಡಿ 2 ಟಿಡಿಓ 2019, ದಿನಾಂಕ: 20-01-2022 ನ್ನು ಈ ಮೂಲಕ ಹಿಂಪಡೆದು ಆದೇಶಿಸಿದೆ.

ಮುಂದುವರೆದು, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 66(3) (ಎನ್) ಮತ್ತು ಸದರಿ ಕಾಯ್ದೆಯ ಕಲಂ 96 (xxxiii) ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಹೊಸದಾಗಿ ನೋಂದಣಿಯಾಗುವ ಮತ್ತು ಈಗಾಗಲೇ ನೋಂದಣಿಯಾಗಿರುವ ಬ್ಯಾಟರಿ ಚಾಲಿತ, ಮಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಇದುವರೆಗೆ ರಹದಾರಿ ಪಡೆಯದೆ ಸಂಚರಿಸುತ್ತಿರುವ ಎಲ್ಲಾ ಸಾರಿಗೆ ವಾಹನಗಳಿಗೆ ಸಂಬಂಧಿಸಿದ ರಹದಾರಿಯನ್ನು ಶುಲ್ಕ ರಹಿತವಾಗಿ ಮಂಜೂರು ಮಾಡಲು ಹಾಗೂ ವಿತರಿಸಲು ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಪುಷ್ಪ ವಿ.ಎಸ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

PR-803

"[illegible]"

रजिस्ट्री सं० डी० एल०-33004/99 REGD. NO. D. L.-33004/99

# भारत का राजपत्र
# The Gazette of India

असाधारण
EXTRAORDINARY
भाग II—खण्ड 3—उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

सं. 4142] नई दिल्ली, बृहस्पतिवार, अक्तूबर 18, 2018/आश्विन 26, 1940
No. 4142] NEW DELHI, THRUSDAY, OCTOBER 18, 2018/ASVINA 26, 1940

## सड़क परिवहन और राजमार्ग मंत्रालय

### आदेश

नई दिल्ली, 18 अक्तूबर, 2018

**का.आ. 5333(अ).**—केन्द्रीय सरकार, मोटर यान अधिनियम,1988 (1988 का 59) की धारा 66 की उपधारा (3) के खंड (ढ) द्वारा प्रदत्त शक्तियों का प्रयोग करते हुए यह आवेश देती है कि धारा 66 की उपधारा (1) के उपबंध, यथास्थिति, माल या यात्रीयों के वहन के प्रयोजन के लिए प्रयुक्त या प्रयोग किये जाने वाले निम्नलिखित प्रकार के परिवहन यानों को लागू नहीं होगें अर्थात:-

(i) केन्द्रीय मोटर यान नियम, 1989 के नियम 2 के खंड (प) में यथा परिभाषित बैटरी चालित यान;

(ii) मेथनाल ईंधन द्वारा चालित कोई यान और;

(iii) इथनाल ईंधन द्वारा चालित कोई यान।

[फा. सं. : आर टी-11036/80/2012-एम वी एल (भाग-IV)]

प्रियांक भारती, संयुक्त सचिव

## MINISTRY OF ROAD TRANSPORT AND HIGHWAYS

### ORDER

New Delhi, the 18th October, 2018

S.O. 5333(E).—In exercise of the powers conferred by clause (n) of sub-section (3) of section 66 of the Motor Vehicles Act, 1988 (59 of 1988), the Central Government hereby orders that the provisions of sub-section (1) of section 66 of the said Act shall not apply to following types of transport vehicles used, or to be used, for the purpose of carriage of goods or passengers as the case may be, namely:-

"ಅನುಬಂಧ-೦೩"

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ


| ಭಾಗ – ೩<br>Part – III | ಬೆಂಗಳೂರು, ಸೋಮವಾರ, ೦೧, ಏಪ್ರಿಲ್, ೨೦೨೪( ಚೈತ್ರ, ೧೨, ಶಕವರ್ಷ, ೧೯೪೬)<br>BENGALURU, MONDAY, 01, APRIL, 2024( CHAITHRA , 12, SHAKAVARSHA, 1946) | ಸಂ. ೨೧೬<br>No. 216 |
|---|---|---|


## Government of Karnataka

No. TD 07 TDR 2024

Karnataka Government Secretariat
M.S. Building,
Bengaluru, Date:30.03.2024

### NOTIFICATION

In the light of amendment to The Karnataka Motor Vehicles Taxation Act 1957 vide Notification No. DPAL 21 SHASANA 2024, Dated:07.03.2024 The Government Notification No. SARIE 76 SAEPA 2016, dated:31.03.2016 Regarding Tax Exemption to Electric Vehicles is hereby revised with effect from 07.03.2024 as Follows;

"In exercise of the powers conferred by sub-section (1) of Section 16 of the Karnataka Motor Vehicles Taxation Act, 1957 (Karnataka Act 35 of 1957) the Government of Karnataka being of the opinion that it is necessary in public interest to do so hereby exempts from payments of taxes on all electric non-transport and transport vehicles including e-rickshaws and e-carts except for Motor cars, Jeeps, Omni Buses and Private Service Vehicles run on Electricity having cost of the vehicle which exceeds Rs.25.00 Lakhs & Tax are levied under column 7 of Part-A5 of the KMVT ACT 1957."

By order and in the name of the
Governor of Karnataka

(PUSHPA .V.S)
Under Secretary to Government,
Transport Department.


ಮುದ್ರಕರು ಹಾಗೂ ಪ್ರಕಾಶಕರು- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297




THAMMAIAH

"ಅನುಬಂಧ-ಒಂದು"

| Electric vehicle BUS registration as on 30-11-2025 | | |
|---|---|---|
| Sl.no | Office code | Electric vehicle count |
| 1 | KA01 | 323 |
| 2 | KA02 | 1 |
| 3 | KA04 | 1 |
| 4 | KA19 | 6 |
| 5 | KA40 | 1 |
| 6 | KA41 | 90 |
| 7 | KA43 | 8 |
| 8 | KA50 | 15 |
| 9 | KA51 | 1500 |
| 10 | KA59 | 11 |
| 11 | KA67 | 1 |
| **Total** | | **1957** |

ಅನುಬಂಧ - ೮

**RAMALINGA REDDY**
Minister for Transport and
Muzrai and Ramanagara District
Incharge Minister

GOVERNMENT OF KARNATAKA

Room No. 315, 315A,
3rd Floor, Vidhana Soudha,
Bengaluru - 560 001
Phone No. 080-22252536,
22033450
E-mail: rlrtmmk@gmail.com

No. MTM/4440/A/2025

Date: 25-10-2025

To
Shri H D Kumaraswamy,
Hon'ble Minister for Heavy Industries,
Government of India,
New Delhi -110001.

Sir,

**Sub: Concerns regarding performance of GCC (Gross Cost Contract) Operators under FAME II& CESL, Smart City Project and Special Assistance to States for Capital Investment 2023-24 – Request for Immediate Intervention and Rectification – Reg.**

At the outset, we appreciate the environment friendly initiative of electric mobility in public transport across the Nation and particularly, Bengaluru has been privileged to be a part of this transformational journey.

However, I write with a sense of pressing concern and compelling urgency regarding the operational efficacy and service discipline of certain GCC (Gross Cost Contract) operators who have been entrusted with the deployment and operation of electric buses in Bengaluru. The performance of operators under GCC, predominantly OEMs such as NTPC Vidyut Vyapar Nigam, Tata Motors Limited (TML), Switch Mobility, and their associated operating entity, OHM Global Mobility, has fallen significantly short of the standards expected from industry leaders of their stature.

The operators have failed to address the issues like lack of structured and rigorous driver training, poor maintenance, cancellations, breakdowns, battery issues, and insufficient driver preparedness lead to rise in road accidents and repeated flash strikes. As against the proposed minimum manpower deployment of 2.3 personnel per bus, it is observed that the deployment of as little as 1.9 to 2.0 personnel per bus as cost-cutting measure by operators with far reaching consequences. This regression has stained the reputation of BMTC and, by extension, the image of Bengaluru as a progressive metropolis.

This glaring gap has rendered frontline personnel ill-equipped to uphold even the most basic standards of service excellence. Please find the below tables detailing key performance indicators of the above-mentioned GCC operators.

**1. NTPC Vidyut Vyapar Nigam - 90 Buses**

| Sl. No | Parameters | Year | | | Total |
|---|---|---|---|---|---|
| | | 2023 - 24 | 2024- 25 | 2025-26 (April to Sep 2025) | |
| 1 | % Of Cancellations | 5.5 | 9.8 | 7.5 | 6.22 |
| 2 | No. of Breakdowns | 6 | 60 | 84 | 150 |
| 3 | Breakdowns due to battery performance | 102 | 138 | 602 | 842 |
| **Others** | | | | | |
| 1 | Mobile Phone Usage | 5 | 9 | 4 | 18 |
| 2 | Drink/Rash Driving | 13 | 18 | 28 | 59 |
| **Penalties** | | | | | |
| | Penalties Imposed (Rs. in Lakhs) | 91.0 | 638.0 | 251.0 | 980.0 |

**2. Switch Mobility Automotive Limited - 300 Buses**

| Sl. No | Parameters | Year | | | Total |
|---|---|---|---|---|---|
| | | 2023 - 24 | 2024- 25 | 2025-26 (April to Sep 2025) | |
| 1 | % Of Cancellations | 2.25 | 4.98 | 9.8 | 5.68 |
| 2 | No. of Breakdowns | 10 | 260 | 173 | 443 |
| 3 | Breakdowns due to battery performance | - | 272 | 10,704 | 10,976 |
| **Others** | | | | | |
| 1 | Mobile Phone Usage | 19 | 4 | 10 | 33 |
| 2 | Drink/Rash Driving | 16 | 28 | 24 | 68 |
| **Penalties** | | | | | |
| | Penalties Imposed (Rs. in Lakhs) | 76.53 | 163.52 | 65.47 | 305.52 |

3. TML Smart City Mobility Solutions Limited - 1031 Buses

| Sl. No | Parameters | Year | | | Total |
|---|---|---|---|---|---|
| | | 2023 - 24 | 2024- 25 | 2025-26 (April to Sep 2025) | |
| 1 | % Of Cancellations | 3.84 | 3.36 | 4.38 | 3.86 |
| 2 | No. of Breakdowns | - | 257 | 735 | 992 |
| 3 | Breakdowns due to battery performance | - | 244 | 1,876 | 2,120 |
| **Others** | | | | | |
| 1 | Mobile Phone Usage | 5 | 54 | 33 | 92 |
| 2 | Drink /Rash Driving | 30 | 277 | 160 | 467 |
| **Penalties** | | | | | |
| | Penalties Imposed (Rs. in Lakhs) | 45.96 | 824.85 | 328.23 | 1199.0 |

4. OHM Global Mobility Private Limited - 251 Buses

| Sl. No | Parameters | Year | | Total |
|---|---|---|---|---|
| | | 2024- 25 | 2025-26 (April to Sep 2025) | |
| 1 | % Of Cancellations | 12.84 | 8.78 | 10.81 |
| 2 | No. of Breakdowns | 86 | 378 | 464 |
| 3 | Breakdowns due to battery performance | - | 144 | 144 |
| **Others** | | | | |
| 1 | Mobile Phone Usage | 03 | 21 | 24 |
| 2 | Drink/Rash Driving | 06 | 26 | 32 |
| **Penalties** | | | | |
| | Penalties Imposed (Rs. in Lakhs) | 7.65 | 59.60 | 67.25 |

Details of Flash Strikes by Electric Bus Drivers

| Name of the Operator | Date | Depot No. | No. of schedules cancelled | Kms cancelled | Revenue Loss (in Rs.) | Reasons for Strikes |
|---|---|---|---|---|---|---|
| M/s. TML Smart City Mobility solutions Ltd | 13.02.2024 | 3 | 5 | 2459.0 | 106,597.7 | Salary |
| | 06.03.2024 | 3 | 8 | 1185.0 | 50,421.8 | Salary |
| | 08.05.2024 | 3 | 40 | 8808.0 | 388,697.0 | Salary |
| | 09.05.2024 | 3 | 38 | 8671.0 | 402,941.4 | Salary |
| | 14.05.2024 | 3 | 73 | 15447.8 | 686,346.0 | Salary |
| | 18.10.2025 | 4 | 35 | 5307.0 | 313,113.0 | Deepavali Bonus |
| | 18.05.2025 | 16 | 84 | 1095.3 | 68,467.0 | Salary |
| | 22.10.2025 | 16 | 48 | 4337.0 | 325,796.0 | Deepavali Bonus |
| | 23.10.2025 | 16 | 66 | 8726.8 | 655,557.0 | Deepavali Bonus |
| | 09.04.2025 | 22 | 77 | 3405.9 | 194,204.0 | Salary |
| | 09.05.2025 | 22 | 12 | 1381.3 | 81,179.0 | Salary |
| | 10.05.2025 | 22 | 10 | 1437.5 | 84,481.8 | Salary |
| | 08.10.2025 | 22 | 88 | 2229.0 | 140,048.0 | Salary |
| | 23.10.2025 | 22 | 78 | 8473.7 | 508,760.9 | Deepavali bonus |
| | 24.10.2025 | 22 | 128 | 24061.7 | 1,444,664.5 | Deepavali bonus |
| Total | | | **790** | **97026.0** | **5,451,275.02** | |
| M/s. OHM Global Mobility Private Limited | 09.10.2025 | 18 | 3 | 3004.0 | 152,120.0 | Salary |
| | 10.10.2025 | 7, 13,25 | 114 | 17902.0 | 1,224,483.0 | Salary |
| Total | | | **117** | **20906.0** | **1,376,603.0** | |
| M/s. Switch Mobility Automotive Ltd | 08.01.2023 | 30 | 28 | 6300.0 | 409,500.0 | Salary |
| | 22.05.2025 | 32 | 81 | 21074.6 | 1,160,500.0 | Salary |
| | | | | | | |
| | 23.05.2025 | 32 | 40 | 6223.6 | 409,120.0 | Salary |
| | 21.10.2025 | 30 | 3 | 7437.7 | 483,452.2 | Deepavali bonus |
| **Total** | | | **152** | **41035.9** | **2,462,572.2** | |

As compared against the performance of BMTC's conventional diesel fleet, the disparity in operational reliability under the GCC electric bus contracts is both stark and deeply concerning. The electric buses operated by the GCC operators are witnessing nearly three (3) times the number of cancellations compared with the diesel counterparts.

**BMTC Operational Performance - 5423 Diesel Buses**

| Sl. No | Parameters | Year | | | Total |
|---|---|---|---|---|---|
| | | 2023 - 24 | 2024- 25 | 2025-26 (April to Sep 2025) | |
| 1 | % of Cancellations | 1.7 | 1.4 | 3.1 | 2 |
| 2 | No.of Breakdowns | 37 | 68 | 17 | 122 |
| **Others** | | | | | |
| 1 | Mobile Phone Usage | 173 | 257 | 131 | 561 |
| 2 | Drink/Rash Driving | 17 | 39 | 11 | 67 |

Furthermore, the total number of fatalities attributed to these GCC operators is due to systemic negligence and absence of accountability. Such a tragic toll on human life is both incomprehensible and indefensible, underscoring an urgent need for oversight, reform, and the imposition of meaningful consequences.

The table below highlights the total number of fatalities recorded under the purview of these Operators:

| Type of Accident / Period | Fatal | Major | Minor | Total |
|---|---|---|---|---|
| 2023-24 | 3 | 1 | 2 | 6 |
| 2024-25 | 11 | 4 | 14 | 29 |
| 2025-26 (April to Sep-25) | 10 | 11 | 14 | 35 |

Presently, BMTC operates 65,000 trips each day with 7,067 buses (5,423 powered by diesel and 1,644 representing the electric fleet). Despite this vast scale, the Corporation's diesel buses maintain an exceptional safety record, with accidents registering at a mere 0.05 per lakh kilometres of operations. In stark contrast, electric buses exhibit a higher accident rate of 0.07 per lakh kilometres: and it is tarnishing the image of the Organisation.

In view of the above, I earnestly urge your good self to:

1. **Initiate a performance review** of GCC operators under FAME II & CESL and other projects with a particular focus on Breakdowns, Safety compliance and Driver training.

2. **Incorporate binding clauses in future tender documents**, mandating comprehensive and certified driver training protocols by GCC operators, prior to commencement of services.

3. **Institute a compliance monitoring mechanism** jointly undertaken by State Transport Utilities and the Ministry, to ensure adherence to safety and service benchmarks.

I remain confident that you shall view this matter 0and take corrective steps at the earliest in the larger interest of commuter welfare and the credibility of e-mobility initiatives.

Best Regards,

Yours Sincerely,

(Ramalinga Reddy)

Cc:

- Secretary, Transport Department, Government of Karnataka.
- Managing Director, Bengaluru Metropolitan Transport Corporation.